C.C- 1114/2025
ಪಿ. ಡಬ್ಲೂ – 1

ಸಾಕ್ಷಿಯನ್ನು ದಿಃ 13.08.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿತಳ ಪರ ವಕೀಲರಾದ ಶ್ರೀ. ಎಂ.ಎ.ಬಿ ರವರಿಂದಃ**

ನನ್ನ ಗಂಡನ ವೇತನ ಚೀಟಿಯನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬಲ್ಲೆ. ನಾನು ಹೆಚ್ ಡಿ ಎಫ್ ಸಿ ಬ್ಯಾಂಕಿನಲ್ಲಿ ಗ್ರೂಪ್ ಲೋನ್, ಎಸ್ ಕೆ ಎಸ್ ಮತ್ತು ಬಿ ಎಸ್ ಎಸ್ ಸಂಘಗಳಲ್ಲಿ ಸಾಲವನ್ನು ಪಡೆದಿದ್ದೇನೆ. ಆ ಸಂಘಗಳನ್ನು ಅಲ್ಲದೇ ಬೇರೆ ಸಂಘಗಳಲ್ಲಿ ಸಹ ಸಾಲ ಮಾಡಿದ್ದೆ. ಅವುಗಳನ್ನು ತೀರುವಳಿ ಮಾಡಿದ್ದೇನೆ. ನಾನು ಸಂಘಗಳಲ್ಲಿ ಸಾಲ ಪಡೆಯುವಾಗ ನನ್ನ ಮಗಳು ಗಾಯತ್ರಿ.ಜಿ ನನಗೆ ಜಾಮೀನುದಾರಳಾಗಿ ಸಹಿ ಮಾಡುತ್ತಾಳೆ.

ಕಾರ್ಗಲ್ ನ ಮಾಲತೇಶರವರು ನನಗೆ 4-5 ವರ್ಷಗಳಿಂದ ಪರಿಚಯವಿದ್ದಾರೆ. ಅವರು ಟೈಲರಿಂಗ್ ಕೆಲಸವನ್ನು ಮಾಡುತ್ತಿದ್ದಾರೆ. ನನ್ನ ಹಿರಿಯ ಮಗಳ ಹೆಸರು ಸೋನಿಯಾ ಜಿ. ಮಾಲತೇಶರವರು ಕೈಗಡವಾಗಿ ಹಣವನ್ನು ಕೊಡುವುದು ಹಾಗೂ ವಾಪಸ್ಸು ಪಡೆದುಕೊಳ್ಳುವುದು ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಪರಿಚಯದ ಮೇರೆಗೆ ಮಾಲತೇಶನಿಂದ ಆರೋಪಿತಳಿಗೆ 40 ಸಾವಿರ ರೂ.ಗಳನ್ನು 2025 ಫೆಬ್ರವರಿಯಲ್ಲಿ ಸಾಲ ಕೊಡಿಸಿದೆ ಎಂದರೆ ಸರಿ. ಆ ಸಾಲದ ಹಣವನ್ನು ನನ್ನ ಜವಾಬ್ದಾರಿಯ ಮೇಲೆ ಆರೋಪಿತಳಿಗೆ ಕೊಟ್ಟಿದ್ದು, ಆ ಹಣವನ್ನು ವಸೂಲಿ ಮಾಡುವ ಬಾಧ್ಯತೆಯು ನನ್ನ ಮೇಲೆ ಇತ್ತು ಎಂದರೆ ಸರಿ. ಆ ಸಾಲವನ್ನು ಕೊಟ್ಟಾಗ ಮಾಲತೇಶನು ಆರೋಪಿತಳ ವಾಹನದ ಆರ್.ಸಿಯನ್ನು ಭದ್ರತೆಯಾಗಿ ಪಡೆದುಕೊಂಡಿದ್ದರು ಎಂದರೆ ಸರಿ. ಆರ್.ಸಿಯನ್ನು ಪಡೆದುಕೊಳ್ಳುವ ಸಂದರ್ಭದಲ್ಲಿ 000031 ರ ಚೆಕ್ ಅನ್ನು ಸಹ ಪಡೆದುಕೊಂಡಿದ್ದರು ಎಂದರೆ, ಸಾಕ್ಷಿಯು ಚೆಕ್ ಅನ್ನು ಪಡೆದುಕೊಂಡಿದ್ದು ನಿಜ. ಆದರೆ ಯಾವ ಚೆಕ್ ನಂಬರ್ ಎಂದು ನನಗೆ ನೆನಪಿಲ್ಲ. ನಿಪಿ-1 ರ ಚೆಕ್ ಅನ್ನು ಆರೋಪಿತಳು ಮಾಲತೇಶನಿಗೆ ಕೊಟ್ಟಿದ್ದಳು ಎನ್ನುವುದು ಸರಿಯಲ್ಲ. ಸದರಿ ಮಾಲತೇಶನನ್ನು ಕರೆದು 40 ಸಾವಿರ ರೂ.ಗಳ ಭದ್ರತೆಗಾಗಿ ನಿಪಿ-1 ಅನ್ನು ಆರೋಪಿತಳು ಅವನಿಗೆ ಕೊಡಲಿಲ್ಲ, ಬದಲಾಗಿ ಬೇರೆ ನಂಬರಿನ ಚೆಕ್ ಅನ್ನು ಕೊಟ್ಟಿದ್ದಾಳೆ ಎಂದು ವಿಚಾರಣೆ ಮಾಡಿಸಬಲ್ಲೆ ಹಾಗೂ ಆ ಚೆಕ್ ಅನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುವಂತೆ ಅವನಿಗೆ ತಿಳಿಸುತ್ತೇನೆ. ಸದರಿ 40 ಸಾವಿರ ರೂ.ಗಳ ಸಾಲದ ಹಣವನ್ನು ಬಡ್ಡಿ ಸಹಿತವಾಗಿ ಏಪ್ರಿಲ್ 2025 ರವರೆಗೆ ನನ್ನ ಹಾಗೂ ನನ್ನ ಹಿರಿಯ ಮಗಳು ಸೋನಿಯಾರವರ ಖಾತೆಗೆ ಆರೋಪಿತಳು ಹಣವನ್ನು ವರ್ಗಾವಣೆ ಮಾಡಿದ್ದಾಳೆ ಎಂದರೆ ಸರಿ.

ಮುಂದುವರೆದು ಆ ಹಣವು ಹೆಚ್ ಡಿ ಎಫ್ ಸಿ ಬ್ಯಾಂಕಿನಲ್ಲಿ ಪಡೆದ ಗ್ರೂಪ್ ಲೋನ್ ನ ಸಾಲದ ಹಣ ಎನ್ನುತ್ತಾರೆ. ಮಾಲತೇಶ್ ನಿಂದ ಪಡೆದ ಸಾಲದ ಹಣವನ್ನು ಆರೋಪಿತಳು ಮೇಲಿನಂತೆ ನನ್ನ ಮತ್ತು ಮಗಳ ಖಾತೆಗೆ ವರ್ಗಾವಣೆ ಮಾಡಿದ್ದಾಳೆ ಎಂದರೆ ಸರಿಯಲ್ಲ. ಮಾಲತೇಶನು ಆರೋಪಿತಳಿಗೆ ನೀಡಿದ 40 ಸಾವಿರ ರೂ. ಹಣವು ಸಂಪೂರ್ಣವಾಗಿ ಮರು ಪಾವತಿ ಆಗಿದೆ ಎಂದು ಆರೋಪಿತಳಿಗೆ ಹೇಳಿದ್ದಾನೆ ಎಂದರೆ ಸರಿಯಲ್ಲ. ಏಪ್ರಿಲ್ 2025 ರಲ್ಲಿ ಆರೋಪಿತಳು ನನಗೆ ಫೋನ್ ಮಾಡಿ ವಾಹನದ ಆರ್.ಸಿ ಯನ್ನು ಮತ್ತು ಚೆಕ್ ಅನ್ನು ವಾಪಸ್ಸು ಕೊಡುವಂತೆ ಕೇಳಿದ್ದಾಳೆ ಎನ್ನುವುದು ಸರಿಯಲ್ಲ. ಆಗ ಸದರಿ ದಾಖಲೆಗಳು ನನ್ನ ಬಳಿ ಇದ್ದು, ಅವುಗಳ ಮೇಲೆ ನಾನು ಯಾವುದೇ ಕ್ರಮ ತೆಗೆದುಕೊಳ್ಳುವುದಿಲ್ಲ ಎಂದು ನಾನು ಆರೋಪಿತಳಿಗೆ ಹೇಳಿದ್ದೆ ಎಂದರೆ ಸರಿಯಲ್ಲ.

ನನ್ನ ಹಿರಿಯ ಮಗಳು ಕಾರ್ಗಲ್ ನ ಕೆನರಾ ಬ್ಯಾಂಕ್ ಶಾಖೆಯಲ್ಲಿ ಖಾತೆಯನ್ನು ಹೊಂದಿದ್ದು, ಆರೋಪಿತಳು ಸದರಿ ಖಾತೆಗೆ ಹಣವನ್ನು ವರ್ಗಾವಣೆ ಮಾಡಿದ್ದು, ಆ ಪಾಸ್ ಪುಸ್ತಕವನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸಬಲ್ಲೆ. ನ್ಯಾಯಾಲಯದಿಂದ ಈ ಪ್ರಕರಣದ ವಾರೆಂಟ್ ಜಾರಿ ಮಾಡಲು ಪೋಲಿಸರು ಹೋದಾಗಲೇ ಆರೋಪಿತಳಿಗೆ ಈ ಕೇಸಿನ ವಿಚಾರ ಗೊತ್ತಾಯಿತು ಎನ್ನುವುದು ಸರಿಯಲ್ಲ ಮುಂದುವರೆದು ಆರೋಪಿತಳ ಮದುವೆ ನಿಶ್ಚಯವಾಗಿದ್ದಾಗ ಚೆಕ್ ಬೌನ್ಸ್ ಆದ ವಿಚಾರವನ್ನು ತಿಳಿಸಿ ನಂತರ ನಾನು ಪ್ರಕರಣವನ್ನು ದಾಖಲು ಮಾಡಿದ್ದೇನೆ ಎನ್ನುತ್ತಾರೆ.

ಸಾಕ್ಷಿಗೆ ಅವಳ ಪರವಾಗಿ ಸಲ್ಲಿಸಿದ ಖಾಸಗಿ ದೂರನ್ನು ಸಲ್ಲಿಸಿ, ಅದನ್ನು ನಾನು ಓದಿಲ್ಲ ಎಂದರೆ ಸರಿಯಲ್ಲ. ಮುಂದುವರೆದು ಈಗ ನನಗೆ ಅದರ ಸಂಗತಿಗಳು ನೆನಪಿಲ್ಲ ಎನ್ನುತ್ತಾರೆ. ದೂರಿನ ಪ್ರತಿ ಪುಟಕ್ಕೆ ನಾನು ಸಹಿಯನ್ನು ಮಾಡಿದ್ದೇನೆ. ನಿಪಿ-6 ರ ಮೇಲೆ ಕಾಣಿಸಿದ ವಿಳಾಸದಲ್ಲಿ ಆರೋಪಿತಳು ಯಾವತ್ತೂ ವಾಸವಾಗಿಲ್ಲ ಎಂದರೆ, ನನಗೆ ಗೊತ್ತಿಲ್ಲ. ಆರೋಪಿತಳು ನನಗೆ ಅವಳ ಆಧಾರ್ ಕಾರ್ಡನ್ನು ನೀಡಿದ್ದಾಳೆ ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಆಧಾರ್ ಕಾರ್ಡಿನ ವಿಳಾಸವನ್ನೇ ನಿಪಿ-6 ರಲ್ಲಿ ಬರೆಯಲಾಗಿದೆಯೇ, ನನಗೆ ಗೊತ್ತಿಲ್ಲ ಎನ್ನುತ್ತಾರೆ. ಆರೋಪಿತಳು ಸಾಗರ ತಾಲ್ಲೂಕಿನ ಬಾಳಗೋಡು, ಮಡಸೂರು ಲಿಂಗದಹಳ್ಳಿಯಲ್ಲಿ ವಾಸವಾಗಿದ್ದು, ಈ ವಿಳಾಸಕ್ಕೆ ಸಂಬಂಧಪಟ್ಟಂತೆ ಆರೋಪಿತಳು ಜಾಮೀನನ್ನು ಪಡೆದಾಗ ತನ್ನ ಆಧಾರ್ ಕಾರ್ಡನ್ನು ಕೊಟ್ಟಿದ್ದಾಳೆ ಎಂದರೆ, ಇರಬಹುದು ಎನ್ನುತ್ತಾರೆ. ನಿಪಿ-4 ರ ನೋಟೀಸ್ ಆರೋಪಿತಳಿಗೆ ತಲುಪಿಲ್ಲ ಎಂದರೆ, ನನಗೆ ಗೊತ್ತಿಲ್ಲ. ಸುಳ್ಳು ವಿಳಾಸಕ್ಕೆ ನಾನು ನೋಟೀಸ್ ಅನ್ನು ಕಳುಹಿಸಿ ಅಂಚೆ ಇಲಾಖೆಯವರೊಂಗೆ ಶಾಮೀಲಾಗಿ ಅನ್ ಕ್ಲೇಮ್ಡ್ ಎಂದು ಹಿಂತಿರುಗುವಂತೆ ಮಾಡಿದ್ದೇನೆ ಎಂದರೆ ಸರಿಯಲ್ಲ. ನ್ಯಾಯಾಲಯದಿಂದ ನೊಂದಾಯಿತ ಅಂಚೆ ಮೂಲಕ ಕಳುಹಿಸಿದ ಸಮನ್ಸ್ ಸಹ ಆರೋಪಿತಳು ಆ ವಿಳಾಸದಲ್ಲಿ ವಾಸವಾಗಿಲ್ಲ ಎಂಬ ಕಾರಣಕ್ಕಾಗಿ

ವಾಪಸ್ಸಾಗಿದೆ ಎಂದರೆ, ನನಗೆ ಗೊತ್ತಿಲ್ಲ. ನನ್ನ ಬಳಿ ಆರೋಪಿತಳ ಆಧಾರ್ ಕಾರ್ಡಿನ ಜೆರಾಕ್ಸ್ ಪ್ರತಿ ಇಲ್ಲ ಎಂದರೆ ಸರಿಯಲ್ಲ. ಒಂದು ವೇಳೆ ಸದರಿ ದಾಖಲೆ ನನ್ನ ಬಳಿ ಇದ್ದಿದ್ದರೆ ಅದನ್ನು ನ್ಯಾಯಾಲಯದ ಮುಂದೆ ಹಾಜರು ಪಡಿಸುತ್ತಿದ್ದೆ ಎಂದರೆ ಸರಿಯಲ್ಲ. ಮುಂದುವರೆದು ಮುಂದಿನ ಮುದ್ದತ್ತಿನ ದಿನಾಂಕದಂದು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಚಾರಗಳು ಸುಳ್ಳು ಎನ್ನುವುದು ಸರಿಯಲ್ಲ. ಆರೋಪಿತಳು ನನಗೆ ಕಾನೂನಾತ್ಮಕವಾಗಿ ಕೊಡಬೇಕಾದ ಯಾವುದೇ ಹಣ ಇಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.